ಕರ್ನಾಟಕ ಸರ್ಕಾರ

ಉಪ ನಿರ್ದೇಶಕರ ಕಚೇರಿ, ಶಾಲಾ ಶಿಕ್ಷಣ ಇಲಾಖೆ, (ಪದವಿ ಪೂರ್ವ) ಬೆಂಗಳೂರು ಉತ್ತರ ಜಿಲ್ಲೆ, 18ನೇ ಅಡ್ಡರಸ್ತೆ,
ಮಲ್ಲೇಶ್ವರಂ, ಬೆಂಗಳೂರು – 560012.

E-mail:ddan.pue@gmail.com

ಸಂಖ್ಯೆ: ಪಪೂಶಿಇ/ಉನಿ/ಬೆಂಉ/Cultural Activity/2025-26

ದಿನಾಂಕ: 20.11.2025

## ಜ್ಞಾಪನ

**ವಿಷಯ:** 2025-26 ನೇ ಸಾಲಿನ ಜಿಲ್ಲಾ ಮಟ್ಟದ ಸಾಂಸ್ಕೃತಿಕ ಸ್ಪರ್ಧೆಗಳನ್ನು ನಡೆಸುವ ಬಗ್ಗೆ

**ಉಲ್ಲೇಖ :** ಮಾನ್ಯ ನಿರ್ದೇಶಕರು ಶಾಲಾ ಶಿಕ್ಷಣ ಇಲಾಖೆ(ಪದವಿ ಪೂರ್ವ) ಬೆಂಗಳೂರು
ಇವರ ಪತ್ರ ಸಂಖ್ಯೆ: 1550464/DPUEACA0OTH/226/2025-26.
ದಿನಾಂಕ: 31-10-2025.

******

ಬೆಂಗಳೂರು ಉತ್ತರ ಜಿಲ್ಲಾ ವ್ಯಾಪ್ತಿಯ ಪದವಿ ಪೂರ್ವ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಜಿಲ್ಲಾ ಮಟ್ಟದ ಸಾಂಸ್ಕೃತಿಕ ಸ್ಪರ್ಧೆಗಳನ್ನು ದಿನಾಂಕ:_20-11-2025_ರಂದು ನಡೆಸಲು ತೀರ್ಮಾನಿಸಲಾಗಿದ್ದು, ಜಿಲ್ಲೆಯ ಎಲ್ಲಾ ಪ್ರಾಂಶುಪಾಲರುಗಳು ತಮ್ಮ ಕಾಲೇಜುಗಳ ವಿದ್ಯಾರ್ಥಿಗಳನ್ನು ಸ್ಪರ್ಧೆಗಳಲ್ಲಿ ಭಾಗವಹಿಸಲು ಅಗತ್ಯ ಕ್ರಮತೆಗೆದುಕೊಳ್ಳಲು ತಿಳಿಸಿದೆ.

ಸಾಂಸ್ಕೃತಿಕ ಸ್ಪರ್ಧೆಗಳು ಬೆಳಗ್ಗೆ 9.30 ರಿಂದ ಪ್ರಾರಂಭವಾಗುತ್ತವೆ. ವಿದ್ಯಾರ್ಥಿಗಳು ತಮ್ಮ ಕಾಲೇಜಿನ ಗುರುತಿನ ಪತ್ರದೊಂದಿಗೆ ಸ್ಪರ್ಧೆ ನಡೆಯುವ ಸ್ಥಳದಲ್ಲಿ ಕನಿಷ್ಟ ಒಂದು ಗಂಟೆ ಮುಂಚಿತವಾಗಿ ಹಾಜರಿರತಕ್ಕದ್ದು.

**ಸ್ಪರ್ಧಾ ನಿಯಮಗಳು:**

1. ರಸಪ್ರಶ್ನೆ ಸ್ಪರ್ಧೆಗೆ ಪ್ರಥಮ ಮತ್ತು ದ್ವಿತೀಯ ಪಿಯುಸಿ ತರಗತಿಗಳಿಂದ ತಲಾ ಇಬ್ಬರು ಮಾತ್ರ ಭಾಗವಹಿಸುವುದು.
2. ಉಳಿದ ಸ್ಪರ್ಧೆಗಳಿಗೆ ಪ್ರಥಮ ಮತ್ತು ದ್ವಿತೀಯ ಪಿಯುಸಿ ತರಗತಿಗಳಿಂದ ಒಬ್ಬೊಬ್ಬ ಸ್ಪರ್ಧಿಯನ್ನು ಮಾತ್ರ ಕಳುಹಿಸಬೇಕು.
3. ಪ್ರತಿ ಸ್ಪರ್ಧಿಗೆ ನೋಂದಣಿ ಸಂಖ್ಯೆ ನೀಡುವುದರಿಂದ ಸ್ಪರ್ಧಿಗಳು ಕೇವಲ ನೋಂದಣಿ ಸಂಖ್ಯೆಯನ್ನು ಮಾತ್ರ ಬರೆಯಬೇಕು ತಮ್ಮ ಹಾಗೂ ಕಾಲೇಜಿನ ಹೆಸರನ್ನು ಬರೆಯತಕ್ಕದ್ದಲ್ಲ.
4. ಪ್ರತಿ ಸ್ಪರ್ಧೆಯಲ್ಲಿ ವಿಜೇತರಿಗೆ ಪ್ರಥಮ ಬಹುಮಾನವಾಗಿ ರೂ. 1500/- ದ್ವಿತೀಯ ಬಹುಮಾನವಾಗಿ ರೂ.1200/- ಹಾಗೂ ತೃತೀಯ ಬಹುಮಾನವಾಗಿ ರೂ. 900/- ಗಳನ್ನು ನಗದಾಗಿ ನೀಡಲಾಗುವುದು.
5. ಪ್ರತಿ ಸ್ಪರ್ಧೆಯಲ್ಲಿ ಪ್ರಥಮ ಮತ್ತು ದ್ವಿತೀಯ ಸ್ಥಾನ ಪಡೆದ ವಿದ್ಯಾರ್ಥಿಗಳು ಮಾತ್ರ ವಿಭಾಗ ಮಟ್ಟದ ಸ್ಪರ್ಧೆಯಲ್ಲಿ ಭಾಗವಹಿಸುವ ಅರ್ಹತೆ ಹೊಂದುತ್ತಾರೆ.
6. ಸ್ಪರ್ಧೆಯಲ್ಲಿ ತೀರ್ಪುಗಾರರ ನಿರ್ಣಯವೇ ಅಂತಿಮವಾಗಿರುತ್ತದೆ.
7. ಬೆಂಗಳೂರು ವಿಭಾಗೀಯ ಮಟ್ಟದ ಸ್ಪರ್ಧೆಗಳು ನಡೆಯುವ ದಿನಾಂಕ: ಹಾಗೂ ಸ್ಥಳದ ವಿವರಗಳನ್ನು ಉಪನಿರ್ದೇಶಕರ ಕಚೇರಿಯಿಂದ ಪಡೆದುಕೊಳ್ಳುವುದು.

**ಸ್ಥಳ: ನ್ಯಾಷನಲ್ ಅಕಾಡೆಮಿ ಫಾರ್ ಲರ್ನಿಂಗ್**

**ರಾಜಾರೆಡ್ಡಿ ಲೇಔಟ್**

**ಚಿಕ್ಕಬಾಣಾವರ, ಬೆಂಗಳೂರು-560090.**

...2

**ಸ್ಪರ್ಧಾ ವಿಷಯ ಹಾಗೂ ವಿವರ**

1. ಕನ್ನಡ ಪ್ರಬಂಧ ಸ್ಪರ್ಧೆ :ಕಾಲಾವಕಾಶ 01 ಗಂಟೆ ಉತ್ತರ ಪತ್ರಿಕೆಗಳನ್ನು ಸ್ಥಳದಲ್ಲಿಯೇ ನೀಡಲಾಗುವುದು.

   ಪ್ರಥಮ ಪಿಯುಸಿ –"ನನ್ನ ಕನಸಿನ ಭಾರತ"

   ದ್ವಿತೀಯ ಪಿಯುಸಿ –" ಕೃತಕ ಬುದ್ಧಿಮತ್ತೆಯು ಮಾನವನ ಅಸ್ತಿತ್ವಕ್ಕೆ ಮಾರಕ "

2. ಇಂಗ್ಲೀಷ್ ಪ್ರಬಂಧ ಸ್ಪರ್ಧೆ :ಕಾಲಾವಕಾಶ 01 ಗಂಟೆ ಉತ್ತರ ಪತ್ರಿಕೆಗಳನ್ನು ಸ್ಥಳದಲ್ಲಿಯೇ ನೀಡಲಾಗುವುದು.

   ಪ್ರಥಮ ಪಿಯುಸಿ –"" India of my Dreams"

   ದ್ವಿತೀಯ ಪಿಯುಸಿ –" Artificial Intelligence is a threat to Humankind"

3. ಭಾವಗೀತೆ ಗಾಯನ ಸ್ಪರ್ಧೆ –ಕಾಲಾವಕಾಶ ೦೫ ನಿಮಿಷ

4. ಜಾನಪದ ಗೀತೆ ಗಾಯನ ಸ್ಪರ್ಧೆ – ಕಾಲಾವಕಾಶ ೦೫ ನಿಮಿಷ

5. ಕನ್ನಡ ಚರ್ಚಾ ಸ್ಪರ್ಧೆ –ಕಾಲಾವಕಾಶ 4+1 ನಿಮಿಷ.

   ಪ್ರಥಮ ಪಿಯುಸಿ :– "ವಾಯುಗುಣ ಬಿಕ್ಕಟ್ಟಿಗೆ ಮನುಕುಲವೇ ಹೊಣೆ".

   ದ್ವಿತೀಯ ಪಿಯುಸಿ :– "ಇಂದಿನ ಶಿಕ್ಷಣ ವ್ಯವಸ್ಥೆ ವಿದ್ಯಾರ್ಥಿಗಳ ಸರ್ವತೋಮುಖ ಅಭಿವೃದ್ಧಿಗೆ ಪೂರಕವೆ?"

6. ಇಂಗ್ಲೀಷ್ ಚರ್ಚಾ ಸ್ಪರ್ಧೆ –ಕಾಲಾವಕಾಶ 4+1 ನಿಮಿಷ.

   ಪ್ರಥಮ ಪಿಯುಸಿ – Mankind is mainly responsible for climate crisis.

   ದ್ವಿತೀಯ ಪಿಯುಸಿ – Does the present education system support holistic development of students ?

7. ಚಿತ್ರಕಲಾ ಸ್ಪರ್ಧೆ: ಕಾಲಾವಕಾಶ 1 ಗಂಟೆ

   ಸ್ಪರ್ಧೆಯ ವಿಷಯವನ್ನು 1 ಗಂಟೆ ಮುಂಚಿತವಾಗಿ ಪ್ರಕಟಿಸಲಾಗುವುದು. ಚಿತ್ರ ಬಿಡಿಸಲು ಡ್ರಾಯಿಂಗ್ ಶೀಟ್ ನೀಡಲಾಗುವುದು.

8. ಏಕಪಾತ್ರಾಭಿನಯ : ಪ್ರತಿ ಸ್ಪರ್ಧೆಗೆ 4+1 ನಿಮಿಷ ಕಾಲಾವಕಾಶವಿರುತ್ತದೆ. ಒಂದಕ್ಕಿಂತ ಹೆಚ್ಚು ಪಾತ್ರಗಳಲ್ಲಿ ಅಭಿನಯಿಸಬೇಕು. ವೇಷ ಭೂಷಣಕ್ಕಿಂತಲೂ ವಾಕ್ ಚಾತುರ್ಯ, ಅಭಿನಯಕ್ಕೆ ಹೆಚ್ಚು ಗಮನ ನೀಡುವುದು.

9. ರಸಪ್ರಶ್ನೆ( ಸಾಮಾನ್ಯ ಜ್ಞಾನ) : ಪೂರ್ವಭಾವಿ ಲಿಖಿತ ಸ್ಪರ್ಧೆ ನಡೆಸಿ, ನಾಲ್ಕು ತಂಡಗಳನ್ನು ಆಯ್ಕೆ ಮಾಡಿ ಅನಂತರ ಮೌಖಿಕ ಸ್ಪರ್ಧೆ ನಡೆಸಲಾಗುವುದು. ಇಲ್ಲಿ ಇತಿಹಾಸ, ಕಲೆ, ಸಂಸ್ಕೃತಿ, ಕ್ರೀಡೆ ವಿಜ್ಞಾನ ಮತ್ತು ಸಾಮಾನ್ಯ ಜ್ಞಾನಗಳಿಗೆ ಸಂಬಂಧಿಸಿದ ವಿಷಯಗಳ ಕನಿಷ್ಟ 10 ಪ್ರಶ್ನೆಗಳನ್ನು ಕೇಳಲಾಗುವುದು.

10. ಜಾನಪದ ನೃತ್ಯ : ( SOLO) ಕಾಲಾವಕಾಶ–4+1 ನಿಮಿಷ

11. ವಿಜ್ಞಾನ ಮಾದರಿ ತಯಾರಿಕೆ

    1. ಮಾದರಿಯು ವಿಜ್ಞಾನದ ತತ್ವ ಸಿದ್ಧಾಂತಗಳನ್ನಾಧರಿಸಿರಬೇಕು.
    2. ಮಾದರಿಯು ಸ್ವಂತಿಕೆಯುಳ್ಳದ್ದಾಗಿರಬೇಕು.
    3. ಮಾದರಿಯು ಮೂರು ಆಯಾಮದ್ದಾಗಿರಬೇಕು. (ಚಾರ್ಟ್ ಗಳಿಗೆ ಅವಕಾಶವಿರುವುದಿಲ್ಲ).

ಉಪನಿರ್ದೇಶಕರು,
ಶಾಲಾ ಶಿಕ್ಷಣ ಇಲಾಖೆ, (ಪದವಿ ಪೂರ್ವ)
ಬೆಂಗಳೂರು ಉತ್ತರ, ಬೆಂಗಳೂರು.

ಪ್ರತಿ:

1. ಮಾನ್ಯ ನಿರ್ದೇಶಕರು ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) 18ನೇ ಅಡ್ಡರಸ್ತೆ, ಮಲ್ಲೇಶ್ವರಂ,ಬೆಂಗಳೂರು
2. ಬೆಂಗಳೂರು ಉತ್ತರ ಜಿಲ್ಲೆಯ ಎಲ್ಲಾ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರುಗಳಿಗೆ ಮುಂದಿನ ಕ್ರಮಕ್ಕೆ.
3. ಕಚೇರಿ ಪ್ರತಿ

## 2025-26ನೇ ಸಾಲಿನ ಜಿಲ್ಲಾ ಮಟ್ಟದ ಸಾಂಸ್ಕೃತಿಕ ಸ್ಪರ್ಧೆ ಕಾರ್ಯಕ್ರಮ ನಡೆಸಲು ನಿಯೋಜಿಸಿದ ಸಮಿತಿ/ಸಂಯೋಜನಾಧಿಕಾರಿಗಳ ವಿವರ

**1. ಕೋರ್ ಸಮಿತಿ :**

1. ಶ್ರೀಮತಿ ಸಂಧ್ಯಾಮೆನೆಜಿಸ್, ಪ್ರಾಂಶುಪಾಲರು, ಕಾರ್ಮೆಲ್ ಪದವಿ ಪೂರ್ವ ಕಾಲೇಜು, ಬಸವೇಶ್ವರ ನಗರ, ಬೆಂಗಳೂರು
2. ಶ್ರೀ ಶ್ರೀಕಂಠಯ್ಯ ಪ್ರಾಂಶುಪಾಲರು, ರಾಜಾಜಿನಗರ ಪದವಿ ಪೂರ್ವ ಕಾಲೇಜು, ರಾಜಾಜಿನಗರ, ಬೆಂಗಳೂರು
3. ಶ್ರೀ ಗುರುರಾಜ್ ಎಸ್ ಪ್ರಾಂಶುಪಾಲರು, ಪದವಿ ಪೂರ್ವ ಕಾಲೇಜು, ನಗರೂರು, ಬೆಂಗಳೂರು
4. ಶ್ರೀ ಕೃಷ್ಣಮೂರ್ತಿ ಆರ್.ಪ್ರಾಂಶುಪಾಲರು, ಹೊಂಬೇಗೌಡ ಪದವಿ ಪೂರ್ವ ಕಾಲೇಜು, ಗಾಯತ್ರಿನಗರ,
5. ಶ್ರೀ ದಿಲೀಪ್ ಬಿ ಎಂ, ಪ್ರಾಂಶುಪಾಲರು, ದಕ್ಷಾ ಪದವಿ ಪೂರ್ವ ಕಾಲೇಜು, ಅಂದರಹಳ್ಳಿ, ಬೆಂಗಳೂರು
6. ಶ್ರೀಮತಿ ಸಂಪದ ಉಪನ್ಯಾಸಕರು, ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜು,13ನೇ ಅಡ್ಡರಸ್ತೆ,ಮಲ್ಲೇಶ್ವರಂ, ಬೆಂಗಳೂರು

**2. ಉದ್ಘಾಟನಾ/ಬಹುಮಾನ ವಿತರಣಾ ಸಮಿತಿ:**

1. ಶ್ರೀಮತಿ ಸಂಧ್ಯಾ ಮೆನೆಜೆಸ್ ಪ್ರಾಂಶುಪಾಲರು, ಕಾರ್ಮೆಲ್ ಪದವಿ ಪೂರ್ವ ಕಾಲೇಜು, ಬಸವೇಶ್ವರನಗರ,
2. ಶ್ರೀಮತಿ ರತ್ನಕಲಾ ಪ್ರಾಂಶುಪಾಲರು, ಮದರ್ ತೆರೇಸಾ ಪದವಿ ಪೂರ್ವ ಕಾಲೇಜು, ಬೆಂಗಳೂರು
3. ಸಿಸ್ಟರ್ ಸೋಫಿ ಪಿ ಓ ಪ್ರಾಂಶುಪಾಲರು, ಸೇಂಟ್ ಆನ್ಸ್ ಪದವಿ ಪೂರ್ವ ಕಾಲೇಜು, ರಾಮಮೂರ್ತಿನಗರ
4. ಶ್ರೀ ನೂರ್ ಅಹಮದ್ ಉಪನ್ಯಾಸಕರು, ಗಂಗಾಧರೇಶ್ವರ ಪದವಿ ಪೂರ್ವ ಕಾಲೇಜು, ಬೆಂಗಳೂರು
5. ಶ್ರೀಮತಿ ಸಂಪದ ಉಪನ್ಯಾಸಕರು, ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜು,13ನೇ ಅಡ್ಡರಸ್ತೆ,ಮಲ್ಲೇಶ್ವರಂ, ಬೆಂಗಳೂರು

**3. ಮೂಲಭೂತ ಸೌಲಭ್ಯ ಸಮಿತಿ/ Hospitality/ overall**

1. ಶ್ರೀ ಕೃಷ್ಣಮೂರ್ತಿ ಪ್ರಾಂಶುಪಾಲರು, ಹೊಂಬೇಗೌಡ ಪದವಿ ಪೂರ್ವ ಕಾಲೇಜು, ಗಾಯತ್ರಿನಗರ, ಬೆಂಗಳೂರು
2. ಶ್ರೀ ವೇಣುಗೋಪಾಲ್, ಪ್ರಾಂಶುಪಾಲರು, ಸರ್ಕಾರಿ ಪದವಿ ಪೂರ್ವ ಕಾಲೇಜು, ಕೋಡಿಗೆಹಳ್ಳಿ, ಬೆಂಗಳೂರು
3. ಶ್ರೀ ಆನಂದ್, ಪ್ರಾಂಶುಪಾಲರು, ಪಿ.ಕೆ.ಬಿ. ಪದವಿ ಪೂರ್ವ ಕಾಲೇಜು, ಬೆಂಗಳೂರು.
4. ಚಿಕ್ಕಲಿಂಗಯ್ಯ ಪ್ರಾಂಶುಪಾಲರು, ಜಿ ಟಿ ಪದವಿ ಪೂರ್ವ ಕಾಲೇಜು, ಸುಂಕದಕಟ್ಟೆ, ಬೆಂಗಳೂರು
5. ಶ್ರೀ ಶ್ರೀನಿವಾಸ್, ಪ್ರಾಂಶುಪಾಲರು, ನಿಸರ್ಗ ಪದವಿ ಪೂರ್ವ ಕಾಲೇಜು, ಬೆಂಗಳೂರು.

ಉಪನಿರ್ದೇಶಕರು,
ಶಾಲಾ ಶಿಕ್ಷಣ ಇಲಾಖೆ, (ಪದವಿ ಪೂರ್ವ)
ಬೆಂಗಳೂರು ಉತ್ತರ, ಬೆಂಗಳೂರು.

ಪ್ರತಿ

1. ಮೇಲ್ಕಂಡ ಸಮಿತಿಯಲ್ಲಿರುವ ಪ್ರಾಂಶುಪಾಲರು/ಉಪನ್ಯಾಸಕರುಗಳಿಗೆ-ಮುಂದಿನ ಕ್ರಮಕ್ಕಾಗಿ.
2. ಕಚೇರಿ ಪ್ರತಿ

2024-25ನೇ ಸಾಲಿನ ಜಿಲ್ಲಾ ಮಟ್ಟದ ಸಾಂಸ್ಕೃತಿಕ ಸ್ಪರ್ಧೆ ಕಾರ್ಯಕ್ರಮ ನಡೆಸಲು ನಿಯೋಜಿಸಿದ ಸಂಯೋಜನಾಧಿಕಾರಿಗಳ ವಿವರ.

| ಕ್ರ.ಸಂ | ಸ್ಪರ್ಧೆಗಳು | ಸಂಯೋಜನಾಧಿಕಾರಿ/ಪ್ರಾಂಶುಪಾಲರ ಶ್ರೀ/ಶ್ರೀಮತಿ | ಕಾಲೇಜು ಸಂಕೇತ ಸಂಖ್ಯೆ |
|---|---|---|---|
| 1. | ಪ್ರಥಮ ಪಿಯುಸಿ – ರಸಪ್ರಶ್ನೆ ಸ್ಪರ್ಧೆ | ನಳಿನಿ | ಎಎನ್ 0186 |
| 2. | ದ್ವಿತೀಯ ಪಿಯುಸಿ-ರಸಪ್ರಶ್ನೆ ಸ್ಪರ್ಧೆ | ಪಾ. ಲಕ್ಷ್ಮೀಸ ಸೋಂದ | ಎಎನ್ 1024 |
| 3. | ಪ್ರಥಮ ಪಿಯುಸಿ – ಕನ್ನಡ ಪ್ರಬಂಧ ಸ್ಪರ್ಧೆ | ಸುಂದರೇಶ್. ಕೆ. ಟಿ | ಎಎನ್ 0240 |
| 4. | ದ್ವಿತೀಯ ಪಿಯುಸಿ– ಕನ್ನಡ ಪ್ರಬಂಧ ಸ್ಪರ್ಧೆ | ತ್ರಿವೇಣಿ ವಿ | ಎಎನ್ 0416 |
| 5. | ಪ್ರಥಮ ಪಿಯುಸಿ –English Essay | ಶೋಭಾ ಅಣಜಿ | ಎಎನ್ 0549 |
| 6. | ದ್ವಿತೀಯ ಪಿಯುಸಿ– English Essay | ಮಹಾಂತೇಶ್ | ಎಎನ್ 0133 |
| 7. | ಪ್ರಥಮ ಪಿಯುಸಿ – ಕನ್ನಡ ಚರ್ಚಾ ಸ್ಪರ್ಧೆ | ರಂಗಲಕ್ಷ್ಮೀ | ಎಎನ್ 1000 |
| 8. | ದ್ವಿತೀಯ ಪಿಯುಸಿ– ಕನ್ನಡ ಚರ್ಚಾ ಸ್ಪರ್ಧೆ | ಗಾಯತ್ರಿ | ಎಎನ್ 0947 |
| 9. | ಪ್ರಥಮ ಪಿಯುಸಿ – English Debate | ರೋನಾಲ್ಡ್ | ಎಎನ್ 00611 |
| 10. | ದ್ವಿತೀಯ ಪಿಯುಸಿ– English Debate | ಪ್ರಶಾಂತಿ | ಎಎನ್ 1008 |
| 11. | ಪ್ರಥಮ ಪಿಯುಸಿ – ಏಕಪಾತ್ರಾಭಿನಯ | ನಾಗಾನಾಯ್ಕ | ಎಎನ್ 0075 |
| 12. | ದ್ವಿತೀಯ ಪಿಯುಸಿ– ಏಕಪಾತ್ರಾಭಿನಯ | ಪದ್ಮಾವತಿ | ಎಎನ್0426 |
| 13. | ಪ್ರಥಮ ಪಿಯುಸಿ –ಭಾವಗೀತೆ ಸ್ಪರ್ಧೆ | ಇಂದಿರಾ ಶ್ಯಾಮ್ ಸುಂದರ್ | ಎಎನ್ 0527 |
| 14. | ದ್ವಿತೀಯ ಪಿಯುಸಿ-ಭಾವಗೀತೆ ಸ್ಪರ್ಧೆ | ಸುಪ್ರಿಯಾ | ಎಎನ್ 0054 |
| 15. | ಪ್ರಥಮ ಪಿಯುಸಿ – ಜಾನಪದ ಗೀತೆ ಸ್ಪರ್ಧೆ | ಶಾಂತಲಾ | ಎಎನ್ 0365 |
| 16. | ದ್ವಿತೀಯ ಪಿಯುಸಿ-ಜಾನಪದ ಗೀತೆ ಸ್ಪರ್ಧೆ | ಸೋಮರೆಡ್ಡಿ | ಎಎನ್ 0150 |
| 17. | ಪ್ರಥಮ ಪಿಯುಸಿ – ಚಿತ್ರಕಲಾ ಸ್ಪರ್ಧೆ | ತುಳಸಿ | ಎಎನ್0362 |
| 18. | ದ್ವಿತೀಯ ಪಿಯುಸಿ– ಚಿತ್ರಕಲಾ ಸ್ಪರ್ಧೆ | ಶ್ರೀದೇವಿ | ಎಎನ್ 0486 |
| 19. | ಪ್ರಥಮ ಪಿಯುಸಿ–ವಿಜ್ಞಾನ ಮಾದರಿ ತಯಾರಿಕೆ | ಆನಂದ್ ಮೂರ್ತಿ | ಎಎನ್ 0525 |
| 20. | ದ್ವಿತೀಯ ಪಿಯುಸಿ– ವಿಜ್ಞಾನ ಮಾದರಿ ತಯಾರಿಕೆ | ಆದಿ ನಾರಾಯಣ | ಎಎನ್ 0554 |
| 21. | ಪ್ರಥಮ ಪಿಯುಸಿ – ಜಾನಪದ ನೃತ್ಯ | ಕಲ್ಪನಾ. ಟಿ | ಎಎನ್ 0144 |
| 22. | ದ್ವಿತೀಯ ಪಿಯುಸಿ– ಜಾನಪದ ನೃತ್ಯ | ಡಾ. ನವೀನ್ | ಎಎನ್0237 |

ಉಪನಿರ್ದೇಶಕರು,
ಶಾಲಾ ಶಿಕ್ಷಣ ಇಲಾಖೆ, (ಪದವಿ ಪೂರ್ವ)
ಬೆಂಗಳೂರು ಉತ್ತರ, ಬೆಂಗಳೂರು.

ಪ್ರತಿ:

1. ಮೇಲ್ಕಂಡ ಸಮಿತಿಯಲ್ಲಿನ ಪ್ರಾಂಶುಪಾಲರುಗಳಿಗೆ –ಮುಂದಿನ ಕ್ರಮಕ್ಕಾಗಿ.
2. ಕಚೇರಿ ಪ್ರತಿ.

ಕರ್ನಾಟಕ ಸರ್ಕಾರ
ಉಪ ನಿರ್ದೇಶಕರ ಕಚೇರಿ, ಶಾಲಾ ಶಿಕ್ಷಣ ಇಲಾಖೆ, (ಪದವಿ ಪೂರ್ವ) ಬೆಂಗಳೂರು ಉತ್ತರ ಜಿಲ್ಲೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560012.
E-mail:ddan.pue@gmail.com

ಸಂಖ್ಯೆ: ಪಮೂಶಿಇ/ಉನಿ/ಬೆಂಉ/Cultural Activity/205-26 ದಿನಾಂಕ: 20.11.2025

## ಜ್ಞಾಪನ

**ವಿಷಯ:** 2024-25 ನೇ ಸಾಲಿನ ಜಿಲ್ಲಾ ಮಟ್ಟದ ಸಾಂಸ್ಕೃತಿಕ ಸ್ಪರ್ಧೆಗಳನ್ನು ನಡೆಸುವ ಬಗ್ಗೆ

**ಉಲ್ಲೇಖ :** ಮಾನ್ಯ ನಿರ್ದೇಶಕರು ಶಾಲಾ ಶಿಕ್ಷಣ ಇಲಾಖೆ(ಪದವಿ ಪೂರ್ವ) ಬೆಂಗಳೂರು ಇವರ ಪತ್ರ ಸಂಖ್ಯೆ: 1550464/DPUEACA0OTH/226/2025-26. ದಿನಾಂಕ: 31-10-2025

******

ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) ಇಲಾಖೆಯ ಬೆಂಗಳೂರು ಉತ್ತರ ಜಿಲ್ಲಾ ವ್ಯಾಪ್ತಿಯ ಪದವಿ ಪೂರ್ವ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ 2025-26 ನೇ ಸಾಲಿನ ಜಿಲ್ಲಾ ಮಟ್ಟದ ಸಾಂಸ್ಕೃತಿಕ ಸ್ಪರ್ಧೆಗಳನ್ನು ದಿನಾಂಕ; 20-11-2025 ರಂದು ನ್ಯಾಷನಲ್ ಅಕಾಡೆಮಿ ಫಾರ್ ಲರ್ನಿಂಗ್, ರಾಜಾರೆಡ್ಡಿ ಲೇಔಟ್, ಚಿಕ್ಕಬಾಣಾವರ, ಬೆಂಗಳೂರು-560090 ಇಲ್ಲಿ ನಡೆಸಲು ತೀರ್ಮಾನಿಸಲಾಗಿದೆ. ಸದರಿ ಕಾರ್ಯಕ್ರಮಕ್ಕೆ ನಿಯೋಜಿಸಿದ ಉಪನ್ಯಾಸಕರುಗಳನ್ನು ಕರ್ತವ್ಯದಿಂದ ಬಿಡುಗಡೆ ಮಾಡಲು ತಿಳಿಸಿದೆ. ಕಾರ್ಯಕ್ರಮದಲ್ಲಿ ಭಾಗವಹಿಸುವ ಪ್ರಾಂಶುಪಾಲರುಗಳ/ಉಪನ್ಯಾಸಕರುಗಳ ಹಾಜರಾತಿಯನ್ನು ಅನ್ಯಕಾರ್ಯ ನಿಮಿತ್ತ ಎಂದು ಪರಿಗಣಿಸಲು ಸೂಚಿಸಿದೆ.

ಉಪನಿರ್ದೇಶಕರು,
ಶಾಲಾ ಶಿಕ್ಷಣ ಇಲಾಖೆ, (ಪದವಿ ಪೂರ್ವ)
ಬೆಂಗಳೂರು ಉತ್ತರ, ಬೆಂಗಳೂರು.

**ಪ್ರತಿ:**

1. ಬೆಂಗಳೂರು ಉತ್ತರ ಜಿಲ್ಲೆಯ ಎಲ್ಲಾ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರುಗಳಿಗೆ ಮುಂದಿನ ಕ್ರಮಕ್ಕೆ.
2. ಕಚೇರಿ ಪ್ರತಿ